1

### ಪರಿಚಯ:

# ಪ್ರೋತ್ಸಾಹದ ಮಾತುಗಳು

ನೀವು ಎಂದಾದರು ಅಧೈರ್ಯಗೊಂಡಿರುವಿರಾ? ನಮ್ಮಲ್ಲಿ ಅನೇಕರು ಪದೇ ಪದೇ ಅಧೈರ್ಯಗೊಳ್ಳುತ್ತೇವೆ.[1] ಅಧೈರ್ಯವನ್ನು ಪ್ರತ್ಯೇಕ ಮಾಡುವ ಸತ್ಯವೇದದ ಪುಸ್ತಕವಾದ ಇಬ್ರಿಯರ ಪತ್ರಿಕೆಯನ್ನು ಅಧ್ಯಯನ ಮಾಡುತ್ತಿದ್ದೇವೆ. ಇಬ್ರಿಯರಿಂದ ಈ ಆಲೋಚನೆಯನ್ನು ನೀವು ಹೊಂದದೆ ಇದ್ದರೂ, ಇದು ಈ ಪುಸ್ತಕದಲ್ಲಿರುವ ಒಂದು ಉದ್ದೇಶವೇ ಎಂದು ಮನಗಾಣುತ್ತೇವೆ. ಈ ಪುಸ್ತಕದಲ್ಲಿ ಮುಂದೆ ಬರಲಿರುವ ವಿಚಾರಗಳನ್ನು ಎದುರು ನೋಡು ವಂತೆ, ಈ "ಪ್ರೋತ್ಸಾಹದ ನುಡಿಗಳನ್ನು ನೀಡುತ್ತಿದ್ದೇನೆ."

## ಎಚ್ಚರಿಕೆ, ಸಂತೈಸುವಿಕೆ, ಅಥವಾ ಪ್ರೋತ್ಸಾಹ?

1985 ರಲ್ಲಿ, ಇಬ್ರಿಯ ಪತ್ರಿಕೆಯಲ್ಲಿ ಪದವಿಯನ್ನು ಪಡೆದಾಗ, ಆ ಪತ್ರಿಕೆಯನ್ನು ನೀಲ್ R. ಲೈಟ್‌ಫುಟ್‌ರವರು ಬೋಧಿಸುತ್ತಿದ್ದರು. "ಅಧ್ಯಾಯ 13ರನ್ನು ಅಧ್ಯಯನ ಮಾಡುವ ಮೂಲಕ ಇಬ್ರಿಯ ಪತ್ರಿಕೆಯನ್ನು ಆರಂಭಿಸೋಣ"[2] ಎಂದು ಸಹೋದರ ಲೈಟ್‌ಫುಟ್‌ರವರು ಹೇಳಿದರು. 13:22ರಲ್ಲಿ ಇಬ್ರಿಯ ಗ್ರಂಥಕತೃ ತಿಳಿಸಿ, "ಸಹೋದರರೇ, ಈ ಎಚ್ಚರಿಕೆಯ *ಮಾತನ್ನು ಸಹಿಸಿಕೊಳ್ಳಬೇಕೆಂದು* ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಿಮಗೆ ಸಂಕ್ಷೇಪವಾಗಿ ಬರೆದಿದ್ದೇನೆ" (ಒತ್ತಿ ಹೇಳಿದ್ದು ನನ್ನದು).

"ಎಚ್ಚರಿಕೆ" ಎಂಬ ಮಾತಿಗೆ ಗ್ರೀಕ್‌ನಲ್ಲಿ "*paraklesis*" ಎಂಬ ನಾಮವಾಚಕವು "*parakaleo*" ಎಂಬ ಗ್ರೀಕ್ ಪದದಿಂದ ಭಾಷಾಂತರಿಸಲಾಗಿದೆ. "*Parakaleo*" ಎಂಬ ಪದಕ್ಕೆ "ಹತ್ತಿರಕ್ಕೆ ಕರೆಯುವುದು" (*para* ["ಹತ್ತಿರಕ್ಕೆ"] ಮತ್ತು *kaleo* ["ಕರೆ"])[3] - ಸಹಾಯಕ್ಕಾಗಿ ಹತ್ತಿರಕ್ಕೆ ಕರೆಯುವುದು. "ಎಚ್ಚರಿಕೆ" (ಇಬ್ರಿಯ 13:22) ಅಥವ "ಸಂತೈಸುವಿಕೆ" (1 ಥೆಸಲೋನಿಕ 4:18) ಎಂದು ಸಹ ಭಾಷಾಂತರಿಸಬಹುದು. ಇಬ್ರಿಯ 10:25ರ NASB ಅನುವಾದದಲ್ಲಿ, "ಪ್ರೋತ್ಸಾಹಿಸುತ್ತಿದ್ದೇನೆ" ಎಂಬ ಕ್ರಿಯಾಪದವನ್ನು ಬಳಸಲಾಗಿದೆ. "ಉತ್ತೇಜನ" ಎಂಬ ಪದದಲ್ಲಿ "ಎಚ್ಚರಿಕೆ" ಹಾಗೂ ಸಂತೈಸುವಿಕೆ ಎಂಬ ಎರಡು ಪದಗಳು ಸೇರಿರುತ್ತವೆ. ಅಧೈರ್ಯಗೊಂಡಿದ್ದ ತನ್ನ ಓದುಗರಿಗೆ ಇಬ್ರಿಯ ಬರಹಗಾರನು ಕೆಲವು ಉತ್ತೇಜನದ ಮಾತುಗಳನ್ನು ಬರೆದಿರುವನು. ಅದರ ಸಂಗಡ ಬಲವಾದ ಎಚ್ಚರಿಕೆಯ ಮಾತುಗಳನ್ನು ಹೇಳಿರುವನು.

ನನ್ನ ಹೆಣ್ಣು ಮಕ್ಕಳು ನನ್ನೊಂದಿಗೆ, ನನ್ನ ಮನೆಯಲ್ಲಿ ವಾಸಿಸುವಾಗ, ಕೆಲವು ಸಾರಿ ನನ್ನ ಸಂತೈಸುವಿಕೆಯು ಆಜ್ಞೆರೂಪದಲ್ಲಿದ್ದರೆ, ಕೆಲವು ಸಾರಿ ಎಚ್ಚರಿಕೆಯ ರೂಪದಲ್ಲಿರುತ್ತಿತ್ತು - ಅವರು ವೃದ್ಧಿಗೊಳ್ಳಬೇಕೆಂದು ಈ ವಿಧವಾಗಿ ಎಚ್ಚರಿಸುತ್ತಿದ್ದೆನು. ಮಕ್ಕಳಿಗೆ ಬುದ್ಧಿ ಹೇಳುವಂತೆ, ದೇವರು ನಮ್ಮನ್ನು ಎಚ್ಚರಿಸುತ್ತಾನೆ (ಇಬ್ರಿಯ 12:5, 7). ನಾವು ಅಧೈರ್ಯಗೊಂಡಾಗ ಸಂತೈಸುವಿಕೆಯು ಅಗತ್ಯವಿದ್ದಂತೆ; ಕೆಲವು ಸಾರಿ "ಎಚ್ಚರಿಕೆಯ" ಮಾತುಗಳಿಂದ ಲಾಭ ಉಂಟಾಗುತ್ತದೆ.

## ಗ್ರಂಥಕತೃ, ಯಾರಿಗೆ ಬರೆದಿರುವನು, ಮತ್ತು ವಿಷಯ

**ಉತ್ತೇಜನ ಅಗತ್ಯವಿದ್ದವರಿಗಾಗಿ ಬರೆಯಲಾಗಿದೆ?**

"ಇಬ್ರಿಯರಿಗೆ" ಈ ಪುಸ್ತಕದ ಪುರಾತನ ನಾಮಾಂಕಿತವಾಗಿದೆ. ಯೆಹೂದ್ಯರು ಇಬ್ರಿಯ ಭಾಷೆಯನ್ನು ಮಾತನಾಡುತ್ತಿದ್ದರು. ಯೆಹೂದ್ಯರಿಗೆ ಇಬ್ರಿಯರು ಎಂದು ಕರೆಯುತ್ತಿದ್ದರು. ಇದರಲ್ಲಿ ಹಳೆಯ ಒಡಂಬಡಿಕೆಯ ಸಂಗತಿಗಳನ್ನು[4] ಪ್ರದರ್ಶಿಸಿರುವದರಿಂದ ಇದನ್ನು ಕ್ರೈಸ್ತರಾದ ಯೆಹೂದ್ಯರಿಗೆ ಬರೆಯಲಾಗಿದೆ.

ಆದರೆ ಚದರಿಹೋಗಿದ ಸಕಲ ಕ್ರೈಸ್ತರಾದ ಯೆಹೂದ್ಯರಿಗೆ ಬರೆದಿರುವದಿಲ್ಲ, ಆದರೆ ನಿರ್ಧಿಷ್ಟವಾದ ಒಂದು ಕ್ರೈಸ್ತ ಯೆಹೂದ್ಯರಿಗೆ ಬರೆಯಲಾಗಿದೆ (ನೋಡಿರಿ 13:17). ಈ ಕ್ರೈಸ್ತರನ್ನು ಇಬ್ರಿಯ ಬರಹಗಾರರನು ಹತ್ತಿರದಿಂದ ಬಲ್ಲವನಾಗಿದ್ದನು (ನೋಡಿರಿ 13:18, 19, 23). ಇದನ್ನು ಪೂರ್ಣ ಸಭೆಗೆ ಬರೆಯದೆ, ಸಭೆಯೊಳಗಿನ ಚಿಕ್ಕ ಗುಂಪಿಗೆ ಬರೆಯಲಾಗಿದೆ (ನೋಡಿರಿ 13:17, 24).

ಈ ಯೆಹೂದ್ಯ ಕ್ರೈಸ್ತರು ಯಾರು, ಅವರೆಲ್ಲಿ ವಾಸಿಸಿದ್ದರು ಎಂಬ ವಿಷಯವನ್ನು ನಾವುಅರಿಯದಿದ್ದರು,[5] ಈ ವಾಕ್ಯಭಾಗದಲ್ಲಿ ಅವರ ಕುರಿತು ಅನೇಕ ವಿವರಣೆಗಳನ್ನು ನೀಡಲಾಗಿದೆ. ಇವರು ಕ್ರೈಸ್ತರ ಎರಡನೆ ಪೀಳಿಗೆಯವರಾಗಿದ್ದರು (2:3). ಕೆಲವು ಸಮಯದ ಹಿಂದೆ ಅವರು ಕ್ರೈಸ್ತರಾಗಿದ್ದರು (5:12; 10:32). ಅವರು ಮಹಾ ಆಸಕ್ತಿಯಿಂದ ಕ್ರೈಸ್ತ ಜೀವಿತ ವನ್ನು ಆರಂಭಿಸಿದರು (6:10; 10:33, 34), ಆದರೆ ಬೇಗನೆ ಅಧೈರ್ಯಗೊಂಡವರಾಗಿದ್ದರು. ಅವರು ಆರಾಧನೆಯನ್ನು ನಿಲ್ಲಿಸಿ ಬಿಟ್ಟಿದ್ದರು (10:25). ಅವರು ಹಿರಿಯರ ಮಾರ್ಗದರ್ಶನವನ್ನು ನಿರಾಕರಿಸಿದ್ದರು (13:17). ಅವರು ಭ್ರಷ್ಟರಾಗುವ ಪರಿಸ್ಥಿತಿಯಲ್ಲಿದ್ದರು[6] (2:1, 3; 6:1-6; 10:26-31).

ಅವರ ಅಧೈರ್ಯಕ್ಕೆ ಕಾರಣಗಳೇನು? "ಹಿಂಸೆಯು" ಒಂದು ಕಾರಣವಿರಬಹುದು (10:32) ಅದು ಇನ್ನು ಹೀನವಾದ ಸ್ಥಿತಿಗೆ ಇಳಿದು ಹೋಗುವದಕ್ಕಿತ್ತು (12:4). ಹಾಗೆಯೇ ಅವರು ಪುನಃ ಯೆಹೂದ್ಯ ಮತಕ್ಕೆ ಹಿಂದಿರುಗುವ ಸಾಧ್ಯತೆಯಿತ್ತು (ಬಹುಶಃ ಕ್ರೈಸ್ತರಲ್ಲದ ಯೆಹೂದ್ಯರ ನಿಮಿತ್ತವಿರಬಹುದು). ಈ ಕ್ರೈಸ್ತರ ಕುರಿತು, ಇವರಿಗೆ ಯಾಜಕರಿಲ್ಲ, ಯಜ್ಞದ ಕ್ರಮಗಳಿಲ್ಲ, ಇವರಿಗೆ ಯೆರೂಸಲೇಮಿನಂತಹ ಮಹಾಪಟ್ಟಣವಿಲ್ಲ; ಎಂಬ ವಾದಗಳು ಉಂಟಾಗಿದ್ದವು. "ಕ್ರೈಸ್ತರಲ್ಲಿ ಈ ಎಲ್ಲವುಗಳು ಅಡಗಿವೆ, ಅವು ಬಹಳ *ಉತ್ತಮವಾದವುಗಳೇ*" ಎಂಬ ತರ್ಕವನ್ನು ಇಬ್ರಿಯ ಬರಹಗಾರನು ತಿಳಿಸಿರುವನು.[7]

ನಮ್ಮಲ್ಲಿ ಅನೇಕರು ಯೆಹೂದ್ಯ ಕ್ರೈಸ್ತರಲ್ಲದೆ ಇರುವದರಿಂದ, ಈ ವಿಚಾರಗಳು ನಮಗೆ ಅನ್ವಯಿಸುತ್ತವೆಯೇ? ನಾವು ಯೆಹೂದ್ಯ ಕ್ರೈಸ್ತರಲ್ಲದಿದ್ದರೂ, ಅದಕ್ಕೆ ಸಂಬಂಧ ಪಟ್ಟವರೇ. ಒಂದು ವೇಳೆ ಆಸಕ್ತಿಯಿಂದ ನಮ್ಮ ಕ್ರೈಸ್ತ ಜೀವಿತವನ್ನು ನಾವುಗಳು ಆರಂಭಿಸಿರಬಹುದು, ಒಂದು ವೇಳೆ ಕಾಲಾಂತರದಲ್ಲಿ ಆ ಆಸಕ್ತಿ ಕುಂದಿ ಹೋಗಿರಬಹುದು. ಪ್ರಪಂಚದಲ್ಲಿ ದೊರಕುವ ಆಶೆಗಳನ್ನು ಈಡೇರಿಸಿಕೊಳ್ಳಲು ನಾವು ವಂಚಿತರಾಗಿದ್ದೇವೆ ಎಂದು ಲೋಕವು ಪಿಸುಗುಟ್ಟಬಹುದು. ಒಂದು ವೇಳೆ ಹಳೆಯ ಜೀವಿತಕ್ಕೆ ಹಿಂದಿರುಗಲು ಶೋಧನೆ ಗೊಳಗಾಗಿರಬಹುದು. *ಯಾರೂ ನೀಡಲಾರದ* ಉತ್ತಮವಾದ ಆಶೀರ್ವಾದಗಳನ್ನು ಕ್ರೈಸ್ತತ್ವವು ನೀಡುವದು ಎಂಬದೇ ಇಬ್ರಿಯ ಗ್ರಂಥದ ಪ್ರಮುಖ ಸಂದೇಶವಾಗಿದೆ.

**ಪ್ರೋತ್ಸಾಹ ನೀಡಿದ ಗ್ರಂಥ ಕತೃ?**

ಗ್ರಂಥ ಕತೃ ತಾನು ಯಾರು ಎಂಬುದಾಗಿ ಪ್ರಕಟಿಸಿಕೊಂಡಿರುವದಿಲ್ಲ.[8] ಈ ಬರವಣಿಗೆ ಯನ್ನು ಪ್ರಥಮವಾಗಿ ಯಾರು ಪಡೆದುಕೊಂಡರೋ, ಅವರು ಮಾತ್ರ ಗ್ರಂಥ ಕತೃವಿನ ಪರಿಚಯವನ್ನು ಹೊಂದಿದ್ದರೇ ಹೊರತು, ನಮಗೆ ಅವನ ಪರಿಚಯವಿರುವದಿಲ್ಲ (ನೋಡಿರಿ

13:19).

ಪೌಲನೇ, ಇಬ್ರಿಯ ಪತ್ರಿಕೆಯನ್ನು ಬರೆದವನು ಎಂಬ ವಿಚಾರವು ಶತಮಾನಗಳಿಂದ ನಂಬಲಾಗಿದೆ. KJVಯ ಕೆಲವು ಮುದ್ರಣಗಳಲ್ಲಿ: ಪೌಲನ ಇಬ್ರಿಯರಿಗೆ ಬರೆದ ಪತ್ರಿಕೆ ಎಂಬುದಾಗಿದೆ. ಇತ್ತೀಚೆಗೆ ಪೌಲನ ಇಬ್ರಿಯ ಬರವಣಿಗೆಯನ್ನು ಪ್ರಶ್ನಿಸಲಾಗಿದೆ. "ಪೌಲನು ಈ ವಿಧವಾದ ಪತ್ರಿಕೆಯನ್ನು ಬರೆದಿರುವದಿಲ್ಲ. ಎಂಬ ತರ್ಕವಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ವಾಕ್ಯಭಾಗಗಳು ಪೌಲನ ಬರವಣಿಗೆಯಂತಿವೆ" (ಉದಾಹರಣೆ 13:22-25). ಅವನು ಈ ಪತ್ರಿಕೆಯ ಬರಹಗಾರನಲ್ಲ ಎಂಬುದಕ್ಕೆ ಯಾವುದೇ ಪುರಾವೆಗಳು ನನ್ನಲ್ಲಿರುವದಿಲ್ಲ. ನನ್ನ ಸ್ವಂತ ಅಧ್ಯಯನದ ಪ್ರಕಾರ[9] ಪೌಲನಾಗಲಿ ಅಥವಾ ಪೌಲನಿಂದ ಪ್ರಭಾವಿತರಾದ ವ್ಯಕ್ತಿಗಳಾಗಲೀ - ಅಂದರೆ ಬಹುಶ ಲೂಕ ಸೀಲ, ಅಪೊಲ್ಲೊಸ ಅಥವಾ ಬಾರ್ನಬನು ಬರೆದಿರಬಹುದು" (ನೋಡಿರಿ ಇಬ್ರಿಯ 13:23).

ಬರೆದಿರುವ ವ್ಯಕ್ತಿಯ ಹೆಸರನ್ನು ನಾವು ತಿಳಿಯದೇ ಹೋಗಿದ್ದರು, ಆದರೆ ಅವನ ಕುರಿತ ಅನೇಕ ಸತ್ಯಗಳನ್ನು ಗ್ರಹಿಸಲು ಸಾಧ್ಯ:

- ಅವನು ನುರಿತ ಪ್ರಸಂಗಿಯಾಗಿದ್ದನು. ಪೂರ್ತಿ ಪುಸ್ತಕವನ್ನು ಪ್ರಸಂಗದಂತೆ ಬರೆಯಲಾಗಿದೆ.
- ತನ್ನ ಓದುಗರ ಬಗ್ಗೆ *ಚಿಂತಕನಾಗಿದ್ದನು.* ನಮ್ಮ ಆತ್ಮೀಕ ವಿಚಾರಗಳ ಬಗ್ಗೆ ಚಿಂತಿಸುವ ಸ್ನೇಹಿತರ ಅಗತ್ಯವು ನಮ್ಮೆಲ್ಲರಿಗಿದೆ.
- ಅವನು ದೇವರನ್ನು ಅವಲಂಭಿಸಿದ್ದನು (ನೋಡಿರಿ 4:7; 13:5).

ಇಬ್ರಿಯ ಬರಹದ ಬರಹಗಾರನ ಕುರಿತು ಅವನು ಪವಿತ್ರಾತ್ಮ ಪ್ರೇರಿತನಾಗಿ ಬರೆದಿರುವನು ಎಂಬುದು ಪ್ರಮುಖ ಅಂಶವಾಗಿದೆ (ನೋಡಿರಿ 3:7). ದೇವರು ನಮ್ಮ ಕುರಿತಾಗಿ ಚಿಂತಿಸುವವನಾಗಿರುವದರಿಂದ ಇಬ್ರಿಯ ಗ್ರಂಥವನ್ನು ನಮಗಾಗಿ ಮೀಸಲಾಗಿಡಲಾಗಿದೆ - ಹೌದು ನಾವುಗಳು ಅಧೈರ್ಯಗೊಳ್ಳುವಾಗ ನಮಗೆ ಸಹಾಯಿಸಿ, ನಮ್ಮನ್ನು ಭಲಪಡಿಸಿ, ಪ್ರೋತ್ಸಾಹವನ್ನು ಆತನು ನೀಡುತ್ತಾನೆ.

**ವಿಷಯ: ಯಾವ ವಿಧವಾದ ಪ್ರೋತ್ಸಾಹವನ್ನು ನೀಡಲಾಗಿದೆ?**

ಪುಸ್ತಕದ ರೂಪವು ಸ್ಪಷ್ಟವಾಗಿದೆ. ಅದು ಒಂದು ಪ್ರಬಂಧದಂತಿದೆ, ಪ್ರಸಂಗವಾಗಿ ಮುಂದುವರೆದಿದೆ, ಮತ್ತು ಒಂದು ಪತ್ರವಾಗಿ ಅಂತ್ಯಗೊಂಡಿದೆ.[10] ಬರೆಯಲ್ಪಟ್ಟ ಪ್ರಸಂಗದಂತಿದೆ, ವಾದ ಮತ್ತು ಎಚ್ಚರಿಕೆಯ ನಡುವಿನ ಅಭಿಪ್ರಾಯದಂತೆ ಬರಹಗಾರನು ಬರೆದಿರವನು.

I. ವಾದ: ಕ್ರಿಸ್ತನು, ಪ್ರವಾದಿಗಳಿಗಿಂತಲೂ, ದೇವದೂತರಿಗಿಂತಲೂ ಶ್ರೇಷ್ಟನು (1:1-14).
II. ಎಚ್ಚರಿಕೆ: (2:1-4).
III. ವಾದ ಕ್ರಿಸ್ತನು ದೇವದೂತರಿಗಿಂತಲೂ, ಮತ್ತು ಮೋಶೆಗಿಂತಲೂ ಶ್ರೇಷ್ಟನು (2:5-3:6).
IV. ಎಚ್ಚರಿಕೆ (3:7-4:16).
V. ವಾದ: ಕ್ರಿಸ್ತನು ಉತ್ತಮವಾದ ಯಾಜಕತ್ವವನ್ನು ಹೊಂದಿರುವನು. ಭಾಗ (5:1-10).
VI. ಎಚ್ಚರಿಕೆ (5:11-6:20).
VII. ವಾದ: ಕ್ರಿಸ್ತನು ಉತ್ತಮವಾದ ಯಾಜಕತ್ವವನ್ನು ಹೊಂದಿರುವನು. ಭಾಗ 11 (7:1-10:18).
VIII. ಎಚ್ಚರಿಕೆ (10:19-13:25).

ಇಬ್ರಿಯ ಪತ್ರಿಕೆಯನ್ನು ಓದುವಾಗ, ಎಚ್ಚರಿಕೆಯ ಮಾತುಗಳನ್ನು ಬರೆದ ನಂತರ ಬರಹಗಾರನ ವಾದಗಳನ್ನು ಗಮನಿಸುತ್ತೇವೆ. 1:14, ರ ಆಲೋಚನೆಯನ್ನು 2:5ರಲ್ಲಿ ಹಾಗೂ 5:10ರ ಆಲೋಚನೆಯನ್ನು 7:1ರಲ್ಲಿ ಗಮನಾರ್ಹವಾಗಿ ಮುಂದುವರೆಸಲಾಗಿದೆ.

ಅಧೈರ್ಯಗೊಂಡ ಕ್ರೈಸ್ತರಿಗೆ, ಅಗತ್ಯವಾದ ಎರಡು ಸಂಗತಿಗಳಿದ್ದವು: (1) ಅವರು ಸಂದೇಹಪಟ್ಟ ವಿಚಾರಗಳ ಕುರಿತ ಬಲವಾದ ಬೋಧನೆ ಮತ್ತು (2) ಅವಿಶ್ವಾಸದ ವಿಚಾರಗಳಲ್ಲಿ ಬಲವಾದ ಉತ್ತೇಜನ. 5:12-14, ಇಬ್ರಿಯ ಪತ್ರಿಕೆಯ ಪ್ರಮುಖ ವಾಕ್ಯಭಾಗ ವಾಗಿದೆ.[11] ಅದರಲ್ಲಿ ಅವರಲ್ಲಿದ್ದ ವಾಕ್ಯಭ್ಯಾಸದ ಕೊರತೆಯನ್ನು ಗಮನಿಸುತ್ತೇವೆ. ಅವರು ವೃದಿಯಾಗಿರಬೇಕಾದ ಸ್ಥಿತಿಯಲ್ಲಿರದೆ, ಪರಿಪಕ್ವ ಹೊಂದದ ಕ್ರೈಸ್ತರಾಗಿದ್ದರು.

ಆ ಆದಿಕ್ರೈಸ್ತರಲ್ಲಿದ್ದಂಥ ಕೊರತೆಗಳು ನಮ್ಮಲ್ಲಿಯೂ ಇರುತ್ತವೆ. ಇಬ್ರಿಯ ಪುಸ್ತಕವು ಯೋಗ್ಯವಾದ ಮಾಹಿತಿಯನ್ನು ಹಾಗೂ ಪ್ರೋತ್ಸಾಹವನ್ನು ನೀಡುತ್ತದೆ. ಗಂಭೀರವಾದ ಓದುಗನಾಗಿ ಈ ನಿರ್ದಿಷ್ಟವಾದ ಪತ್ರಿಕೆಯನ್ನು ಅರ್ಥಮಾಡಿಕೋ.

ಈ ಪತ್ರಿಕೆಯ ಬರವಣಿಗೆಯ ಕಾಲದ ಕುರಿತಾದ ಪ್ರಶ್ನೆಯೂ ಒಳಗೊಂಡಿರುತ್ತದೆ. ಈ ಬರವಣಿಗೆಯ ಸಮಯದಲ್ಲಿ ಯಜ್ಞಗಳನ್ನು ಸಮರ್ಪಿಸುವ ಆಚರಣೆಯು ರೂಢಿಯಲ್ಲಿತು (9:6-10; 13:10). ಈ ಸಂದರ್ಭದಲ್ಲಿ ಇಬ್ರಿಯ ಪತ್ರಿಕೆಯು ಬರೆಯಲ್ಪಟ್ಟಿದ್ದರೆ, ಕ್ರಿ.ಶ. 70ರಲ್ಲಿ, ಅಂದರೆ ಯೆರೂಸಲೇಮಿನ ನಾಶನದ ಮುಂಚಿತವಾಗಿಯೇ ಈ ಪತ್ರಿಕೆಯು ಬರೆಯಲ್ಪಟ್ಟಿರಬಹುದು. ಹೇಗೂ ಇದನ್ನು ಅರ್ಥೈಸಿಕೊಳ್ಳಲು ಸಾಕಷ್ಟು ಮಾಹಿತಿಯನ್ನು ನೀಡಲಾಗಿದೆ.

---

ಟಿಪ್ಪಣಿಗಳು

[1]ಅಧೈರ್ಯಗೊಂಡವರ ಉದಾಹರಣೆ ನೀಡಿರಿ. [2]Neil R. Lightfoot, ACU extension class on Hebrews taught in Fort Worth, Texas, 13 September 1985. Much of the background information in this introductory lesson is from Hebrews 13. [3]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 217 [4]ಇಬ್ರಿಯರ ಪತ್ರಿಕೆಯ ಕೆಲವು ಭಾಗಗಳಲ್ಲಿ ಹಳೇ ಒಡಂಬಡಿಕೆಯ ವಿಚಾರಗಳನ್ನು ನೀಡಿರುವದರಿಂದ ಅರ್ಥೈಸಿಕೊಳ್ಳಲು ಕಷ್ಟವಾಗುತ್ತದೆ. [5]ಯೆರೂಸಲೇಮು ಅಥವಾ ರೋಮಾಪುರದಲ್ಲಿರಬಹುದು. [6]ಒಬ್ಬನ ಧರ್ಮವನ್ನು ತೊರೆಯುವದು "ಭ್ರಷ್ಟತೆ." [7]"ಉತ್ತಮ" ಎಂಬದು ಪ್ರಮುಖ ಪದ. [8]ನಾಲ್ಕು ಸುವಾರ್ತೆಗಳು, ಹಾಗೂ ಅಪೊಸ್ತಲರ ಕೃತ್ಯಗಳ ಬಗ್ಗೆಯೂ ಇದು ನಿಜವಾಗಿದೆ. [9]ಅಧ್ಯಯನದ ಹಿಂದೆ, ಇದು ಪೌಲನ ಪತ್ರಿಕೆಯಲ್ಲಿ ಎಂದು ಅರಿತಿದ್ದೆ ಅದರೆ ಪೌಲನ ಬರವಣಿಗೆಯ ಶೈಲಿಯಲ್ಲಿದೆ, ಆದರೆ ಪುರಾವೆಗಳಿರುವದಿಲ್ಲ. [10]Neil R. Lightfoot, *Jesus Christ Today* (Grand Rapids, Mich.: Baker Book House, 1976), 43.

[11]ಮೂರನೆಯ ವ್ಯಕ್ತಿತ್ವಕ್ಕೆ ಬರೆದಿದ್ದರೂ, ಈ ವಾಕ್ಯಭಾಗವು ಎರಡನೇ ವ್ಯಕ್ತಿತ್ವದಲ್ಲಿದೆ (ನೀನು).